International Journal of Kannada Research
www.kannadajournal.com

ISSN: 2454–5813
IJKR 2018; 4(2): 57-59
© 2018 IJKR
www.kannadajournal.com
Received: 12-02-2018
Accepted: 13-03-2018

**ಡಾ. ಹಣಮಂತ ಬಿ. ಮೇಲಕೇರಿ**
ಉನ್ನತ ಸಂಶೋಧಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

**Correspondence**
**ಡಾ. ಹಣಮಂತ ಬಿ. ಮೇಲಕೇರಿ**
ಉನ್ನತ ಸಂಶೋಧಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

# ಶ್ರೀರಂಗರ ನಾಟಕಗಳು–ಒಂದು ವಿವೇಚನ

**ಡಾ. ಹಣಮಂತ ಬಿ. ಮೇಲಕೇರಿ**

ಕನ್ನಡ ಸಾಹಿತ್ಯದಲ್ಲಿ ಪ್ರಕಟಗೊಂಡ ಮೊಟ್ಟಮೊದಲನೆಯ ನಾಟಕ ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' ೧೭ನೆಯ ಶತಮಾನದಲ್ಲಿ ರಚನೆಯಾಗಿದೆ. ಇದು ಸ್ವತಂತ್ರ ನಾಟಕವಲ್ಲ. ಇದೊಂದು ಸಂಸ್ಕೃತ ನಾಟಕವೊಂದರ ರೂಪಾಂತರಗೊಂಡಿದೆ. ಇದಕ್ಕಿಂತ ಮುಂಚೆ ನಾಟಕಗಳ ಬಗ್ಗೆ ಕನ್ನಡ ಶಾಸನ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳು ದೊರಕುತ್ತವೆ. ಹಾಗೆಯೇ ಜಾನಪದ ರಂಗಭೂಮಿಯ ಯಕ್ಷಗಾನ ದೊಡ್ಡಾಟಗಳಂತೂ ಇಂದಿಗೂ ಸಹ ಜೀವಂತ ಪಡೆದುಕೊಂಡಿವೆ. ಹೀಗಾಗಿ ಕನ್ನಡ ರಂಗಭೂಮಿಗೆ ಶತಶತಮಾನಗಳ ಪರಂಪರೆ ಹೊಂದಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಕ್ರಿ.ಶ. ೧೮೮೦ರಲ್ಲಿ ಕನ್ನಡ ವೃತ್ತಿರಂಗಭೂಮಿ ಉದಯವಾಯಿತು. ಕನ್ನಡ ಜನಪದ ರಂಗಭೂಮಿ ಹಾಗೂ ಮರಾಠಿ ರಂಗಭೂಮಿಗಳಿಂದ ಇದು ಸ್ಫೂರ್ತಿ ಪಡೆದುಕೊಂಡಿತು. ಕನ್ನಡ ವೃತ್ತಿರಂಗಭೂಮಿ ಶಿಷ್ಟ ಹಾಗೂ ಜನಪದಗಳ ಸಮ್ಮಿಶ್ರಣ ಹೊಂದಿದೆ. ಮುಂದೆ ಪಾಶ್ಚಾತ್ಯ ಮಾದರಿಯ ಶಿಕ್ಷಣದಿಂದ ಸುಶಿಕ್ಷಿತರಾದ ಪ್ರೇಕ್ಷಕ ವರ್ಗಕ್ಕೆ ವೃತ್ತಿರಂಗಭೂಮಿಯ ನಾಟಕಗಳ ವಸ್ತು, ಪಾತ್ರ, ನಿರೂಪಣೆಯ ಕ್ರಮ, ಹಳಸಲು ತಂತ್ರಗಳು, ಕೃತಕ ಗ್ರಾಂಥಿಕ ಭಾಷೆ ಇದೇ ಮೊದಲಾದ ದೋಷಗಳು ಆಗಿ ಬರಲಿಲ್ಲ. 'ಕಲೆಗಳು ಬದುಕಿನ ಅನಿವಾರ್ಯತೆಯನ್ನು ಸಾಧಿಸದೇ ಹೋದಾಗ ಅವುಗಳ ಕಲಾತ್ಮಕತೆಯು ಶೂನ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವೃತ್ತಿರಂಗಭೂಮಿ ಅವನತಿಯ ದಾರಿ ಹಿಡಿಯಿತು. ಹಾಗೆಯೇ ಅವನತಿಯತ್ತ ಸಾಗಿದ ವೃತ್ತಿರಂಗಭೂಮಿ ಸುಶಿಕ್ಷಿತ ಸಮುದಾಯದ ಉಪೇಕ್ಷೆಗೊಳಗಾಯಿತು. ಆದರೆ ರಂಗಭೂಮಿಯ ಅನಿವಾರ್ಯತೆಯನ್ನು ಅರಿತ ಈ ಪ್ರೇಕ್ಷಕ ವರ್ಗ ಇದಕ್ಕೆ ಪರ್ಯಾಯವಾಗಿ ತಮ್ಮದೇ ಆದ ಹೊಸ ರಂಗಭೂಮಿಯನ್ನು ಹುಟ್ಟುಹಾಕುವ ಚಿಂತನೆಗೆ ತೊಡಗಿತು. ಈ ದಿಸೆಯಲ್ಲಿ ವೃತ್ತಿರಂಗಭೂಮಿಯ ವ್ಯಾವಹಾರಿಕತೆಯನ್ನು ಕಲೆಯ ಮೌಲಿಕತೆಯನ್ನು ಎತ್ತಿಹಿಡಿಯಲು ಕೈಲಾಸಂ, ಶ್ರೀರಂಗರಂಥ ನಾಟಕಕಾರರು ಹವ್ಯಾಸಿ ರಂಗಭೂಮಿ ಪರಂಪರೆಯನ್ನು ಬೆಳೆಸಿದರು. ಸಾಹಿತ್ಯಿಕ ನಾಟಕಗಳು ಮನರಂಜನೆಗಿಂತ ಪ್ರೇಕ್ಷಕನ ಖುಷಿಯನ್ನು ಎತ್ತರಗೊಳಿಸುವ ಸಾಮಾಜಿಕ ಸಮಸ್ಯೆಗಳತ್ತ ಗಮನಹರಿಸುವ ಪ್ರಮುಖ ಉದ್ದೇಶವನ್ನು ಹೊಂದಿವೆ. ಸಮಸ್ಯೆಯನ್ನು ನಾಟಕದ ಕೇಂದ್ರವಾಗಿಟ್ಟುಕೊಂಡು ರಚಿತವಾಗಿವೆ. ಆಧುನಿಕ ಯುಗದಲ್ಲಿ ಇಂತಹ ನಾಟಕ, ನಾಟಕಕಾರ, ನಟ, ನಿರ್ದೇಶಕ ಇವರಿಗೆ ಬಹಳ ಪ್ರಾಮುಖ್ಯತೆ ಪ್ರಾಪ್ತಿಯಾಯಿತು. ಈ ಹಿನ್ನೆಲೆಯಲ್ಲಿ ಶ್ರೀರಂಗರು ಶತಮಾನದ ಸೃಜನಶೀಲ ಬರಹಗಾರರು. ಇವರು ಪಾಶ್ಚಾತ್ಯ ರಂಗಭೂಮಿಯ ಪ್ರೇರಣೆ ಪ್ರಭಾವಗಳಿಗೆ ಒಳಗಾದವರು. ಜೀವನದ ಹಲವು ಸಮಸ್ಯೆಗಳನ್ನು ವಸ್ತುವನ್ನಾಗಿಟ್ಟುಕೊಂಡು 'ನವಸಮಾಜ ನಿರ್ಮಾಣ'ದ ಕನಸು ಹೊತ್ತು ನಾಟಕ ರಚನೆಗೆ ತೊಡಗಿದವರು. 'ಕನ್ನಡಶ್ಯಾಮ' ಶ್ರೀರಂಗರ ಮೊದಲ ಹಾಸ್ಯ ನಾಟಕವಾಗಿದೆ ಮತ್ತು ಇಂಗ್ಲಿಷ ನಾಟಕಗಳ ಅಂತರಂಗವನ್ನು ಆಳವಾಗಿ ಅರಿತುಕೊಂಡಿದ್ದರು. ಇವುಗಳ ಹಾಗೆ ಕನ್ನಡ ನಾಟಕಗಳ ವಸ್ತು, ತಂತ್ರ, ಭಾಷೆ, ಮೊದಲಾದವುಗಳಲ್ಲಿ ಹೊಸತನ ತರುವ ಆಲೋಚನೆ ಹೊಂದಿದ್ದರು.

## ಶ್ರೀರಂಗರ ಏಕಾಂಕ ನಾಟಕಗಳು

ಹೊಸಗನ್ನಡ ನಾಟಕಗಳಲ್ಲಿ ಏಕಾಂಕ ನಾಟಕ ತುಂಬ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. ಹಾಗೆಯೇ ಶಾಲಾ–ಕಾಲೇಜುಗಳ ವಾರ್ಷಿಕೋತ್ಸವ, ರೇಡಿಯೋ, ದೂರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಮೊದಲಾದವುಗಳಲ್ಲಿ ಜನರ ಅಭಿರುಚಿ ಹೆಚ್ಚಿಸಿದ ಕೀರ್ತಿ ಈ ಏಕಾಂಕ ನಾಟಕಗಳಿಗೆ ಸಲ್ಲುತ್ತದೆ. ಹೀಗಾಗಿ ಶ್ರೀರಂಗರ ಕೆಲವು ಏಕಾಂಕ ನಾಟಕಗಳು ಈ ಕೆಳಗಿನಂತೆ ಕಾಣಬಹುದಾಗಿದೆ.

ಶ್ರೀರಂಗರ 'ಯಮನ ಸೋಲು' ಎಲ್ಲ ಏಕಾಂಕ ನಾಟಕಗಳನ್ನು ಪ್ರತಿನಿಧಿಸುವ ವಿಶಿಷ್ಟ ಕೃತಿಯಾಗಿದೆ.

ಇಲ್ಲಿ ಇವರು ತಮ್ಮ ಬದುಕಿನಲ್ಲಿ ನಡೆದ ನೈಜ ಘಟನೆಯನ್ನು ನಾಟಕದ ವಸ್ತುವನ್ನಾಗಿಸಿದ್ದಾರೆ. ಮಾನವ ಪ್ರಪಂಚದಲ್ಲಿ ಸಾವಿಗೆ ಹೆದರುವಷ್ಟು ಮನುಷ್ಯ ಬೇರೆ ಯಾವುದಕ್ಕೂ ಹೆರುವುದಿಲ್ಲ. ಬದುಕಿನ ಕಹಿ ಘಟನೆಗಳು ಅವನನ್ನು ಸಾವಿಗೆ ಹೆದರದಂತೆ ಮಾಡುತ್ತವೆ ಎಂಬುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

'ಸ್ವಗತ ಸಂಭಾಷಣ' ಶ್ರೀರಂಗರ ಹೊಸ ಬಗೆಯ ಏಕಾಂತ ನಾಟಕ. ಸಾಮಾನ್ಯವಾಗಿ ಶ್ರೀರಂಗರ ನಾಟಕಗಳು ಅರ್ಥವಾಗುವುದಿಲ್ಲ ಎಂಬ ಜನಾಭಿಪ್ರಾಯವಿದೆ. ಆದುದರಿಂದ ನಾಟಕ ಅದರ ಪ್ರಯೋಜನ ಸಾಧ್ಯಾಸಾಧ್ಯತೆಗಳನ್ನೇ ಈ ನಾಟಕದ ವಸ್ತುವನ್ನಾಗಿ ಮಾಡಿದ್ದಾರೆ. ಹೀಗೆ ಏಕಾಂಕ ನಾಟಕಗಳು ಹೊಸಗನ್ನಡ ಸಾಹಿತ್ಯದಲ್ಲಿ ಪರೋಕ್ಷವಾಗಿ ಅಸ್ತಿತ್ವ ಹೊಂದಿ ಜನಪ್ರಿಯ ನಾಟಕ ಪ್ರಸಾರವಾಗಿ ಜನಮನದಲ್ಲಿ ಉಳಿಯಲು ಶ್ರೀರಂಗರು ಪ್ರಮುಖ ಕಾರಣರಾಗಿದ್ದಾರೆ ಎಂಬ ಮಾತು ಶತಸತ್ಯವಾಗಿದೆ.

**ಶ್ರೀರಂಗ ದೊಡ್ಡ ನಾಟಕಗಳು**

ಶ್ರೀರಂಗರ ಎಲ್ಲಾ ನಾಟಕಗಳನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ರಾಜಕೀಯ ಹಾಗೂ ವೈಚಾರಿಕ ನಾಟಕಗಳೆಂದು ಈ ಕೆಳಗಿನಂತೆ ವಿವೇಚಿಸಲಾಗಿದೆ.

**1, ಪೌರಾಣಿಕ ನಾಟಕಗಳು**

ಶ್ರೀರಂಗರ ಕೆಲವು ನಾಟಕಗಳಿಗೆ ವಸ್ತು ಪೌರಾಣಿಕವಲ್ಲದಿದ್ದರೂ ಹೆಸರು ಮಾತ್ರ ಪೌರಾಣಿಕವಾಗಿರುವುದನ್ನು ಕಾಣಬಹುದಾಗಿದೆ. 'ಕೇಳು ಜನಮೇಜಯ' ಇದರ ಹೆಸರು ಮಾತ್ರ ಪೌರಾಣಿಕವಾಗಿದ್ದು, ಆಧುನಿಕ ಜೀವನ ವಿಜ್ಞಾನ ಇದರ ವಸ್ತುವಾಗಿದೆ. ಹಾಗೆಯೇ 'ಸಾವಿತ್ರಿ' ಸಂಜೀವಿನಿಯಂಥ ನಾಟಕಗಳ ವಸ್ತು ಮತ್ತು ಹೆಸರುಗಳೆರಡೂ ಪೌರಾಣಿಕವಾಗಿವೆ. ಶ್ರೀರಂಗರು ಮಹಾಭಾರತದಿಂದ ಕಥೆಯನ್ನು ಆಯ್ದುಕೊಂಡು, 'ಸಾವಿತ್ರಿ' ಎಂಬ ನಾಟಕ ರಚಿಸಿದ್ದಾರೆ. ಇದೇ ಕಥೆಯನ್ನಾಗಿ ಈ ಮೊದಲು 'ಯಮನ ಸೋಲು' ಏಕಾಂಕ ನಾಟಕವನ್ನು ರಚಿಸಿದ್ದಾರೆ. ಗಂಡು-ಹೆಣ್ಣಿನ ಪ್ರೇಮದ ಮೂಲ ಚಿರಂತನ 'ಪ್ರಕೃತಿ' ಎಂಬ ಅಂಶ ಇವರ ಸಂಭಾಷಣೆಯಲ್ಲಿ ಎದ್ದು ಕಾಣುತ್ತದೆ. ಒಟ್ಟಾರೆಯಾಗಿ ಶ್ರೀರಂಗರ 'ಸಾವಿತ್ರಿ' ಅವರ ಪೌರಾಣಿಕ ನಾಟಕಗಳಲ್ಲಿಯೇ ತುಂಬ ಮಹತ್ವದ್ದಾಗಿದೆ.

**2. ಐತಿಹಾಸಿಕ ನಾಟಕಗಳು**

ಶ್ರೀರಂಗರ 'ಸಿರಿಪುರಂದರ' ನಾಟಕ ದಾಸರೆಂದರೆ ಪುರಂದರ ದಾಸರಯ್ಯ ಎಂದು ತಮ್ಮ ಗುಣಗಳಿಂದ ಹೊಗಳಿಸಿಕೊಂಡ ಪುರಂದರದಾಸರ ಬದುಕಿಗೆ ಸಂಬಂಧಿಸಿದ ಚಾರಿತ್ರಿಕ ಅಂಶಗಳನ್ನು ಇಲ್ಲಿ ಚಿತ್ರಿಸುತ್ತಿದೆ. ಹಾಗೆಯೇ ಕೀರ್ತನೆಗಳನ್ನು ಮೂಲ ಆಕರಗಳನ್ನಾಗಿಟ್ಟುಕೊಂಡು ನಾಟಕ ರಚಿಸಿದ್ದಾರೆ. ಈ ನಾಟಕದಲ್ಲಿ ಶೀನಪ್ಪ ನಾಯಕನ ಬಗ್ಗೆ ರಸಿಕವಾಗಿ ಕಾವ್ಯ ಪ್ರೀತಿಯುಳ್ಳವನಾಗಿ ಚಿತ್ರಿತವಾಗಿದ್ದಾನೆ. ಈತನ ರಸಿಕತೆ ವನಜಾಕ್ಷಿ ಎಂಬ ವೇಶ್ಯೆಯ ಅನುರಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಶ್ರೀರಂಗರು ಐತಿಹಾಸಿಕ ಪ್ರಜ್ಞೆಯಿಂದ ಈ ನಾಟಕವನ್ನು ರಚಿಸಿರುವುದು ತುಂಬ ವಿಶಿಷ್ಟವಾಗಿದೆ.

**3. ಸಾಮಾಜಿಕ ನಾಟಕಗಳು**

ಸಮಾಜ ತುಂಬ ಸಂಕೀರ್ಣವಾಗಿದೆ. ವಿವಿಧ ಸಮಸ್ಯೆಗಳು ಸಮಾಜವನ್ನು ಕಿತ್ತು ತಿನ್ನುತ್ತಿವೆ. ಇಂಥಹ ಸಮಸ್ಯೆಯನ್ನೆತ್ತಿಕೊಂಡು ಬರೆಯಲಾದ 'ಹರಿಜನ್ವಾರ' ಸಾಮಾಜಿಕ ನಾಟಕಗಳಲ್ಲಿಯೇ ಬಹು ದೊಡ್ಡ ಅಪೂರ್ವವಾದದ್ದು. ಈ ನಾಟಕದಲ್ಲಿ ಬರುವ ಪಾತ್ರಗಳೆಂದರೆ ತಾತಾ ಚೌರಿ, ವಸಂತ, ಅಂತಪ್ಪ, ಯಮುನಾ, ವೇಣಕ್ಕ ಮತ್ತು ನಬೀಸಾಬ ಮುಂತಾದವರು. ಈ ನಾಟಕದಲ್ಲಿ ಮಧ್ಯಮ ವರ್ಗದ ಜನರ ಜೀವನ ದುಃಖಮಯವೂ ಹಾಗೂ ವಿನೋದಪರವೂ ಆಗಿರುತ್ತದೆ. ಇಂಥಹ ದ್ವಂದ್ವವನ್ನು ಶ್ರೀರಂಗರು ಹರಿಜನ್ವಾರದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಹಾಗೆಯೇ ನಗುವಿನೊಡನೆ ಜೀವನದ ರುದ್ರತೆಯನ್ನು ಪ್ರಕಟಿಸಿದ್ದಾರೆ. ಹೀಗಾಗಿ ಶ್ರೀರಂಗರ ಹೆಸರನ್ನು ಪ್ರಸಿದ್ಧಿಗೆ ತಂದ ನಾಟಕಗಳಲ್ಲಿ 'ಹರಿಜನ್ವಾರ' ಬಹಳ ಮಹತ್ವದ್ದಾಗಿದೆ. ಶ್ರೀರಂಗರ ಎಲ್ಲ ನಾಟಕಗಳಲ್ಲಿ ತಂತ್ರ, ಶೈಲಿ, ವಿಚಾರಗಳಲ್ಲಿ 'ಹರಿಜನ್ವಾರ' ತುಂಬ ಭಿನ್ನವಾಗಿದೆ. ಈ ದಿಸೆಯಲ್ಲಿ ಶ್ರೀರಂಗರ ಸಾಮಾಜಿಕ ನಾಟಕಗಳು ಸಾಮಾಜಿಕ ಸಮಸ್ಯೆಗಳತ್ತ ಜನಸಾಮಾನ್ಯರ ಗಮನ ಸೆಳೆದುದಲ್ಲದೆ ಅನೇಕ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಚಾಲನೆ ನೀಡಿವೆ.

**4. ರಾಜಕೀಯ ನಾಟಕಗಳು**

ಶ್ರೀರಂಗರ 'ಶೋಕಚಕ್ರ' ಒಂದು ಅತ್ಯುತ್ತಮ ರಾಜಕೀಯ ನಾಟಕವಾಗಿದೆ. ಗಾಂಧೀಜಿಯವರ ನೇರ ಪ್ರಭಾವಕ್ಕೆ ಒಳಗಾದ ಇವರು ಸ್ವಾತಂತ್ರ್ಯದ ನಂತರದ ಭಾರತ ಭವಿಷ್ಯವನ್ನು ಕುರಿತು ಹಗಲಿರುಳು ಚಿಂತಿಸಿದವರು. ಈ ನಾಟಕದಲ್ಲಿ ಪ್ರಸ್ತುತತೆಗೊಂಡಿದೆ ಮತ್ತು ನಾಟಕದಲ್ಲಿ ಪರಿಚಯದ ಹಂತ, ಸಂಘರ್ಷದ ಹಂತ, ಶಿಖರ ಸ್ಥಿತಿ ಎಂಬ ಮೂರು ಹಂತಗಳು ಹಾಗೂ ಮೂರು ಅಂಕಗಳಲ್ಲಿ ನಿರೂಪಿತಗೊಂಡಿವೆ.

ರಾಜಕೀಯಕ್ಕಿಂತ ಸಾಮಾಜಿಕ, ಅದಕ್ಕಿಂತ ಮಾನವನ ಅಂತರಂಗದ ಸುಧಾರಣೆ ಆಗಬೇಕೆಂಬ ಆಶಯ ಈ ನಾಟಕದುದ್ದಕ್ಕೂ ಕಾಣಿಸುತ್ತದೆ. ಹಾಗೆಯೇ ಮಾನವನಲ್ಲಿ ವಿವೇಕದ ಜಾಗೃತಿಯನ್ನುಂಟುಮಾಡುವ ಒಂದು ಅಪೂರ್ವ ನಾಟಕ. ಸ್ವತಂತ್ರಭಾರತದ ಸ್ಥಿತಿ-ಗತಿಯ ಮೇಲೆ ಬೆಳಕು ಚೆಲ್ಲುವ ಮಹತ್ವದ ನಾಟಕವಾಗಿದೆ.

**5. ವೈಚಾರಿಕ ನಾಟಕಗಳು**

'ಕೇಳುಜನಮೇಜಯ' ಶ್ರೀರಂಗರ ಶ್ರೇಷ್ಠವಾದ ವೈಚಾರಿಕ ನಾಟಕ. ಈ ನಾಟಕದ ಉದ್ದೇಶ, ಮಹತ್ವವನ್ನು ಸ್ಪಷ್ಟಪಡಿಸುತ್ತಾ, ಶ್ರೀರಂಗರು 'ನಾಟಕದ ಜೀವಾಳವೇ ಅಂತರಂಗ ಬಹಿರಂಗಗಳ ಸಂಘರ್ಷವನ್ನು ತೋರಿಸುವುದು' ಎಂದಿದ್ದಾರೆ. ಮನುಷ್ಯನ ಒಳಗು-ಹೊರಗಿನ ವಿರುದ್ಧ ಸ್ವಭಾವವನ್ನು ಚಿತ್ರಿಸುವುದೇ ಇದರ ಮುಖ್ಯ ವಸ್ತುವಾಗಿದೆ. ಹಾಗೆಯೇ ನಾಟಕ ಸ್ವರೂಪ, ಉದ್ದೇಶ, ಪ್ರಯೋಗಗಳ ಕುರಿತು ಶ್ರೀರಂಗರು ತಮ್ಮ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಈ ನಾಟಕದ ಪ್ರಮುಖ ಪಾತ್ರಗಳೆಂದರೆ ವೃದ್ಧ, ಯುವಕ, ಯುವತಿ, ಸಾಮಾನ್ಯಪ್ಪ ಇತ್ಯಾದಿ. ಕೇಳುಜನಮೇಜಯ ನಾಟಕವು ತನ್ನಿಂದ ತಾನೇ ರೂಪು ಪಡೆದುಕೊಂಡು ಸಮಾಜದ ಜೀವನವನ್ನು ತುಂಬಲಾಗಿದೆ. ಇದೊಂದು ಹೊಸ ಕಲ್ಪನೆಯ ತಂತ್ರವಾಗಿದೆ. ಹೀಗೆ ಶ್ರೀರಂಗರು ದೊಡ್ಡ ನಾಟಕಗಳಿಗಾಗಿ ವಿವಿಧ ಸಮಸ್ಯೆಗಳನ್ನು ಆಯ್ದುಕೊಂಡಿದ್ದಾರೆ. ತಮ್ಮ ವಿಚಾರಗಳನ್ನು ಅವುಗಳ ಮೂಲಕ ತುಂಬ ಅಭಿವ್ಯಕ್ತಿಸಿದ್ದಾರೆ.

'ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು' ಎನ್ನುವಂತೆ ಶ್ರೀರಂಗರು ಅನೇಕ ನಾಟಕಗಳ ಬಗೆಗಿನ ಆಸಕ್ತಿಯನ್ನು ಬಾಲ್ಯದಲ್ಲಿಯೇ ತೋರಿಸಿದರು. ಹಾಗೆಯೇ ಕನ್ನಡ ನಾಟಕ ಸಾಹಿತ್ಯದ ದಿಕ್ಕನ್ನೇ ಬದಲಾಯಿಸಿದವರು ಶ್ರೀರಂಗರು. ಜೀವನದ ಕಷ್ಟ ನಷ್ಟಗಳನ್ನೆಲ್ಲ ಅನುಭವಿಸಿ ಬದುಕನ್ನು ಒಂದು ಸವಾಲನ್ನಾಗಿ ಸ್ವೀಕರಿಸಿದರು. ಇವರು ಕನ್ನಡ ನಾಟಕ ಪರಂಪರೆಯ ಪ್ರವರ್ತಕರಾಗಿ, ಯುಗ ನಿರ್ಮಾಪಕರಾಗಿ ಈ ಶತಮಾನದ ಶ್ರೇಷ್ಠ ನಾಟಕಕಾರ, ನಟ,

ನಿರ್ದೇಶಕ, ಕಲಾಪ್ರೇಮಿ, ಸೃಜನಶೀಲ, ಬರಹಗಾರ ಹಾಗೂ ಪ್ರಸಿದ್ಧ ವಿದ್ವಾಂಸರಾಗಿ ಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಶ್ರೀರಂಗರು ಕನ್ನಡ ನಾಟಕಕಾರರಷ್ಟೇ ಅಲ್ಲ, ಭಾರತೀಯ ರಂಗಭೂಮಿಗೆ ಇವರ ಬಹು ದೊಡ್ಡ ಸಾಧನೆಯಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀರಂಗರು ಏಕಾಂಕ ನಾಟಕಗಳು ಮತ್ತು ದೊಡ್ಡ ನಾಟಕಗಳು ಸುಮಾರು ಅರವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೇ ಕಾವ್ಯ, ಕಥೆ, ಕಾದಂಬರಿ, ಜೀವನ ಚರಿತ್ರೆ, ಭಾಷಾಶಾಸ್ತ್ರ ಮತ್ತು ವಿಮರ್ಶೆ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಕ್ಷೇತ್ರ ಕೈಗೊಂಡಿದ್ದಾರೆ. ಹೀಗಾಗಿ ಶ್ರೀರಂಗರು ನಾಟಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯು ಅತ್ಯಂತ ತುಂಬ ಶ್ಲಾಘನೀಯವಾಗಿದೆ.

**ಆಕರ ಗ್ರಂಥಗಳು**


1. ಡಿ.ಜಿ. ಹಾಜವಗೋಳ, ಶ್ರೀರಂಗರ ನಾಟಕಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1996.
2. ಕೀರ್ತಿನಾಥ ಕುರ್ತಕೋಟಿ, ವಿಮರ್ಶೆಯ ವಿನಯ ನಾಟಕ, ಮನೋಹರ ಗ್ರಂಥಮಾಲಾ, ಧಾರವಾಡ, 1985.
3. ಗಿರಡ್ಡಿ ಗೋವಿಂದರಾಜ, ನಾಟಕ ಸಾಹಿತ್ಯ ಮತ್ತು ರಂಗಭೂಮಿ ಅಕ್ಷರ ಪ್ರಕಾಶನ, ಮೈಸೂರು, 1987.
4. ಶ್ರೀರಂಗ, ನನ್ನ ನಾಟ್ಯ ನೆನಪುಗಳು, ಶ್ರೀರಂಗ ಸ್ವಾರಸ್ವತ ಪ್ರಕಾಶನ, ಬೆಂಗಳೂರು, 1960.